Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President




**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 20 | 14th November 2024

ವಾರದ ಅತಿಥಿ :

**ಶ್ರೀ ಬಿ. ಎಸ್. ರಾಮ್ ಶೆಟ್ಟಿ ಹಾರಾಡಿ**

ರಾಷ್ಟ್ರ ಪ್ರಶಸ್ತಿ ವಿಜೇತ ರಂಗ ಕಲಾವಿದರು

ವಿಷಯ:

## ರಂಗಭೂಮಿ

ಆಸಕ್ತಿ ಮತ್ತು ಅವಕಾಶಗಳು

**Time : 7.00 p.m.**
**Venue : Hotel Shivaprasad Grand, Kundapura**

**39th year of Service and Fellowship**

# ವಾರದ ಸಭೆಯ ವರದಿ




ತಾ.07–11–2024ರ ವಾರದ ಸಭೆಯು ಶಿವಪ್ರಸಾದ್ ಗ್ರಾಂಡ್‌ನಲ್ಲಿ ಕಳೆದ ವಾರ ನಡೆದ Zonal ಸಾಂಸ್ಕೃತಿಕ ಸ್ಪರ್ಧೆಯ ವಿಶ್ಲೇಷಣೆಯಾಗಿದ್ದು, ಕಬ್ಬಿನ ಸದಸ್ಯರು ಅತೀ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡು ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರೂ ಆಗಮಿಸಿದ್ದು ಒಂದು ವಿಶೇಷವಾಗಿತ್ತು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಸಭೆಯಲ್ಲಿ ಕಾರ್ಯದರ್ಶಿ ವರದಿಯನ್ನು ಕಾರ್ಯದರ್ಶಿಗಳು ಮಂಡಿಸಿದರು. ರೊ. ಸುರೇಖಾ ಪುರಾಣಿಕರು ವಾರದ ಚಿಂತನೆಯನ್ನು ನೀಡಿದರೆ, ರೊ.ಕೆ. ಕೆ. ಕಾಂಚನರು ರೋಟರಿ ಮಾಹಿತಿ ನೀಡಿದರು.

ಅಧ್ಯಕ್ಷರು ಭಾಗವಹಿಸಿದ ಎಲ್ಲಾ ಸ್ಪರ್ಧಾರ್ಥಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ ಸಮೂಹ ಗಾಯನಕ್ಕೆ ನಿರ್ದೇಶನ ನೀಡಿದ ಸಾರಂಗರವರಿಗೆ ಹಾಗೂ ಲಘು ಪ್ರಹಸನಕ್ಕೆ ನಿರ್ದೇಶನವನ್ನು ನೀಡಿ ತರಬೇತಿ ನೀಡಿದ ದೂರದ ರೊ. ರಾಮ ಶೆಟ್ಟಿ ಹಾರಾಡಿ ಇವರಿಗೂ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಿದರು. ಏಕವ್ಯಕ್ತಿ ನೃತ್ಯ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದ ಆ್ಯನೆಟ್ ಆರಾಧ್ಯ ಬಾಯರಿಗೆ ಪ್ರಶಸ್ತಿ ಪತ್ರ ಹಾಗೂ ಫಲಕವನ್ನು ಸಭೆಯಲ್ಲಿ ಹಸ್ತಾಂತರಗೊಳಿಸಿದರು. ನಂತರ ಸದಸ್ಯರು ಗಂಗೊಳ್ಳಿಯಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಗಳ ಬಗ್ಗೆ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

ನಂತರ ಅಧ್ಯಕ್ಷರು Nov23/24 ರಂದು ನಡೆಯುವ ನವನಿಧಿ 2024ರ ಬಗ್ಗೆ ಮಾಹಿತಿ ಹಂಚಿಕೊಳ್ಳಲು ರೊ. ಸತ್ಯನಾರಾಯಣ ಪುರಾಣಿಕರಲ್ಲಿ ಕೇಳಿಕೊಂಡು ಅಧ್ಯಕ್ಷ ಖಾತೆಯ ಚೆಕ್ ಹಸ್ತಾಂತರಿಸಿದರು. ರೊ. ಜಿ. ಶ್ರೀಧರ ಶೆಟ್ಟಿ, ರೊ. ವಾಸುದೇವ ಕಾರಂತ್, ರೊ. ಡಾ. ಉಮೇಶ್ ಪುತ್ರನ್, ರೊ. ಸುರೇಖಾ ಪುರಾಣಿಕ್, ರೊ. ಸತ್ಯನಾರಾಯಣ ಪುರಾಣಿಕರವರು TRF ಗೆ ದೇಣಿಗೆ ನೀಡಿರುವುದನ್ನು ಸಭೆಗೆ ತಿಳಿಸಿದರು. ಸಹಭೋಜನದ ಪ್ರಾಯೋಜಕತ್ವ ವಹಿಸಿದ ರೊ. ವಿವಿಯನ್ ಕ್ರಾಸ್ತಾ, ರೊ. ಡಾ. ಉಮೇಶ್ ಪುತ್ರನ್, ರೊ. ವಾಸುದೇವ ಕಾರಂತರಿಗೆ ಧನ್ಯವಾದಗಳನ್ನು ತಿಳಿಸಿದರು ಹಾಗೂ DISTRICT CULTURAL COMPETITION ಹಾಗೂ ನವನಿಧಿ 2024 ಈ ಎರಡು ಕಾರ್ಯಕ್ರಮದಲ್ಲಿ ನಮ್ಮ ಕ್ಲಬ್ ಸದಸ್ಯರು ಭಾಗವಹಿಸಬೇಕಾಗಿ ಕೇಳಿಕೊಂಡರು.

ರೊ. ಸತ್ಯನಾರಾಯಣ ಪುರಾಣಿಕರು TRF ನೀಡುವ ವಿಧಾನದ ಬಗ್ಗೆ ಸಭೆಗೆ ತಿಳಿಸುತ್ತಾ, ಸರ್ವ ಸದಸ್ಯರು ಕನಿಷ್ಠ 10 DOLLAR ದೇಣಿಗೆ ನೀಡಿ ಎಂದು ಕೋರಿದರು.

ರೊ. ವಿವಿಯನ್ ಕ್ರಾಸ್ತಾ ರವರು ಲಕ್ಕಿ ರೋಟೇರಿಯನ್ನಾಗಿ ಮೂಡಿ ಬಂದರು. ರೊ. ಜೆರಾಲ್ಡ್ ಕ್ರಾಸ್ತಾ ರವರು ಹಾಸ್ಯ ಚಟಾಕಿಯನ್ನು ಸಿಡಿಸಿದರು. ರೊ. ದೇವರಾಜ್ ಅವರು ಧನ್ಯವಾದ ಸಮರ್ಪಣೆಗೈದರು. ರಾಷ್ಟ್ರಗೀತೆಯ ಬಳಿಕ ಸಹಭೋಜನದೊಂದಿಗೆ ಸಭೆಯು ಸಂಪನ್ನಗೊಂಡಿತು. ಮಾತೃ ಹೃದಯಿ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸ ಸ್ವತಃ ಉಣಬಡಿಸಿರುವುದು ನಿಜವಾಗಿಯೂ ಒಂದು ಕುಟುಂಬ ಔತಣದ ವಾತಾವರಣ ನಿರ್ಮಾಣವಾಯಿತು.

## Zonal ಸಾಂಸ್ಕೃತಿಕ ಸ್ಪರ್ಧೆ 'ಗಂಗಾ ತರಂಗ' ದ ಕುರಿತು ಸದಸ್ಯರ ಅನಿಸಿಕೆ

**ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ :** ಲಘು ಪ್ರಹಸನಕ್ಕೆ ನಾವು ಇನ್ನೂ ಅಭ್ಯಾಸ ನಿರತರಾಗಿರುತ್ತಿದ್ದರೆ ಇನ್ನೂ ಅತ್ಯುತ್ತಮ ಪ್ರದರ್ಶನವನ್ನು ನೀಡಬಹುದಾಗಿತ್ತು.

**ರೊ. ಡಾ. ಆದರ್ಶ ಹೆಬ್ಬಾರರು** ರೊ ಜೆರಾಲ್ಡ್ ಕ್ರಾಸ್ತಾರವರ ಮನೋಜ್ಞ ಅಭಿನಯವನ್ನು ಕೊಂಡಾಡಿದರು. ಮುಂದಿನ ಬಾರಿಗೆ ಸಾಕಷ್ಟು ಮೊದಲೇ ಅಭ್ಯಾಸನಿರತರಾಗಬೇಕು ಹಾಗೂ ನಮ್ಮಲ್ಲಿದ್ದ ಉತ್ತಮ ಕಲಾವಿದರಿಗೆ ಮುಖ್ಯ ಪಾತ್ರವನ್ನು ನೀಡಬೇಕು.

**ರೊ. ರಮಾನಂದ ಕಾರಂತ್ :** ಸಮೂಹಗಾನ ಸ್ಪರ್ಧೆಯು ಅತ್ಯುತ್ತಮವಾಗಿ ಮೂಡಿಬಂದಿದೆ ಎಂದು ಶ್ಲಾಘಿಸಿದರು.

**ರೊ. ಮಹೇಂದ್ರ ಶೆಟ್ಟಿ :** ಲಘು ಪ್ರಹಸನ ತುಂಬಾ ಚೆನ್ನಾಗಿ ಮೂಡಿಬಂದಿದ್ದು, ಪೊಲೀಸ್ ಪಾತ್ರಧಾರಿಗಳು ಅವರ ಪಾತ್ರಕ್ಕೆ ಜೀವ ತುಂಬಿದ್ದಾರೆ ಎಂದರು.

**ರೊ. ಡಾ. ಉಮೇಶ್ ಪುತ್ರನ್ :** ಸ್ಪರ್ಧೆಗಳಲ್ಲಿ ಭಾಗವಹಿಸಲು ಅಧ್ಯಕ್ಷರು ಎಲ್ಲರನ್ನು ಒಟ್ಟುಗೂಡಿಸಲು ಪಟ್ಟ ಶ್ರಮವನ್ನು ಕೊಂಡಾಡಿದರು.






**Rotary Information**

### Manual Of Procedure

Mannual Of Procedure (MOP) is called Bible of Rotary. The MOP is amended once in three years in Council on Legislation (COL) by COL members.

**by Rtn. K. K. Kanchan**




## ಕಳೆದ ವಾರದ ಚಿಂತನೆ

ತಟ್ಟೆಯಲ್ಲಿನ ಅನ್ನಕ್ಕೆ ಕೈಯಿಡುವಾಗ
ಯಾರಿಂದಲೂ ಕಸಿದಿಲ್ಲವೆಂಬ ಖಾತರಿ ಇರಬೇಕು,
ದಿಂಬಿಗೆ ತಲೆಕೊಟ್ಟು ಮಲಗುವಾಗ
ಯಾರಿಗೂ ಅನ್ಯಾಯ ಮಾಡಿಲ್ಲಾ ಎಂಬ ನೆಮ್ಮದಿ ಇರಬೇಕು.
ಅಂತಾ ಊಟ ಮತ್ತು ನಿದ್ರೆಗಳು ನಮ್ಮ ನಿತ್ಯ ನೇಮಗಳಾದಾಗ
ನಮ್ಮ ಜೀವನ ಪಾವನವಾಗುತ್ತದೆ.
ಸಂತೋಷ ಹಿಂಬಾಲಿಸಿಕೊಂಡುಬರುತ್ತದೆ.

ನೀಡಿದವರು :
**ರೊ. ಸುರೇಖಾ ಪುರಾಣಿಕ್**

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 14–11–2024ನೇ ಗುರುವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಕೆ. ಟಿ. ಸುರೇಂದ್ರನಾಥನ್ ಮತ್ತು ಆ್ಯನ್ ಇಂದು ಸುರೇಂದ್ರನಾಥ್‌ರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : **9880477460**



ತಾ. 20–11–2024ನೇ ಬುಧವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಸಂಕೇತ್ ಹೆಗ್ಡೆ ಮತ್ತು ಆ್ಯನ್ ಐಸಿರಿ ಹೆಗ್ಡೆಯವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : **9902478891**


ಚಿಂತೆಗಳು
ತಲೆಯ ಸುತ್ತ
ಹಾರಾಡುವ
ಹಕ್ಕಿಗಳಿದ್ದಂತೆ
ಹಾರಾಡಲಿ ಬಿಡಿ,
ಆದರೆ, ಅಲ್ಲೇ
ಗೂಡು ಕಟ್ಟಲು
ಅವಕಾಶ ನೀಡಬೇಡಿ
**– ಸುಭಾಷಿತ**

## ಅಭಿನಂದನೆಗಳು



ನಮ್ಮ ಕ್ಲಬ್ಬಿನ PDG ರೊ. ಅಭಿನಂದನ್ ಶೆಟ್ಟಿಯವರಿಗೆ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಇವರಿಗೆ ಅಭಿನಂದನೆಗಳು.

## ಹುಟ್ಟುಹಬ್ಬದ ಶುಭಾಶಯಗಳು



ರೊ. ರೊನಾಲ್ಡ್ ಬರೆಟ್ಟೋ
ದಿನಾಂಕ : ನವೆಂಬರ್ 15
ಮೊಬೈಲ್ : 94482 70078



ರೊ. ಲೊಯೊಲ್ಲಾ ಎ. ಕರ್ವೆಲ್ಲೊ
ದಿನಾಂಕ : ನವೆಂಬರ್ 19
ಮೊಬೈಲ್ : 9343090441

ಅನ್ನದಾನ ಮಾಡುವುದಕ್ಕಿಂತ ಅನ್ನಕ್ಕೆ ದಾರಿ ಮಾಡಿಕೊಡುವುದು ಶ್ರೇಷ್ಠ

ನಿಮ್ಮ ಮೌಲ್ಯವನ್ನರಿಯದ ಮೂರ್ಖನೊಂದಿಗೆ ಎಂದಿಗೂ ವಾದಿಸಬೇಡಿ

